ಅಧ್ಯಕ್ಷರು : ಮುಖ್ಯಮಂತ್ರಿಗಳಿದ್ದಾರೆ. ಇರುತ್ತಾರೆ. ಕುಳಿತುಕೊಳ್ಳಿ, ದಯವಿಟ್ಟು ಕುಳಿತುಕೊಳ್ಳಬೇಕು. ನಾನು ನಿಮ್ಮನ್ನು ಕರೆದಿಲ್ಲ.

ಶ್ರೀ ವಾಟಾಳ್ ನಾಗರಾಜ್ : ನಿಮ್ಮಲ್ಲಿ ಒಂದು ಮನವಿ ಮಾಡುತ್ತೇನೆ, ನಿಮ್ಮ ಆಜ್ಞೆಯನ್ನು ವಿರೋಧ ಮಾಡುತ್ತಿಲ್ಲ ಸ್ವಾಮಿ, ನನ್ನ ಪರಿಸ್ಥಿತಿ ಏನು

ಅಧ್ಯಕ್ಷರು : ಕುಳಿತುಕೊಳ್ಳಿ ಎಂದರೆ ಕುಳಿತುಕೊಳ್ಳಬೇಕು.

ಶ್ರೀ ಡಿ.ಬಿ. ಚಂದ್ರೇಗೌಡ : ತಮ್ಮಲ್ಲಿ ಕೆಲವು ವಿವರಗಳನ್ನು ಕೇಳಬೇಕು.

ಅಧ್ಯಕ್ಷರು : ನಾನು ನಿಮ್ಮನ್ನು ಕರೆಯುತ್ತೇನೆ. ಯಡಿಯೂರಪ್ಪನವರೆ, ಹೇಳುವುದನ್ನು ಆಗಲೇ ಹೇಳಿಯಾಗಿದೆ. ಹೇಳಿಯಾದ ಮೇಲೆ ಮತ್ತೆ ಅದರಲ್ಲಿ ಪ್ರಿವಿಲೇಜ್ ಮೋಷನ್ ಮತ್ತೊಂದು ಬರುವುದಕ್ಕೆ ಕಾರಣ ಏನೂ ಬರುವುದಿಲ್ಲ. ಮಾನ್ಯ ಯಡಿಯೂರಪ್ಪನವರೇ ತಾವು ವಿಚಾರ ಮಾಡುವುದು ಒಳ್ಳೆಯದಿತ್ತು.

ಶ್ರೀ ಬಿ.ಎಸ್. ಯಡಿಯೂರಪ್ಪ : ಸನ್ಮಾನ್ಯ ಅಧ್ಯಕ್ಷರೇ, ರೂಲ್ 190,191ರ ಪ್ರಕಾರ ಈ ಪ್ರಿವಿಲೇಜ್ ಮೋಷನ್ ಅನ್ನು...

ಅಧ್ಯಕ್ಷರು : ನೀವು ನೋಟೀಸನ್ನು ಇವತ್ತು ನನಗೆ ತಲುಪಿಸಿದ್ದೀರಿ. ನನಗೆ ಸ್ವಲ್ಪ ಟೈಮ್ ಕೊಡಿ..

ಶ್ರೀ ಎಸ್. ಬಂಗಾರಪ್ಪ : ಆ ವಿಚಾರದಲ್ಲಿ ನಾನು ಈಗಾಗಲೇ ಅದರ ಬಗ್ಗೆ ಹೇಳಿಯಾಗಿದೆ.

ನೋ ಕಾನ್ಫಿಡೆನ್ಸ್ ಮೋಷನ್‌ನಲ್ಲಿ ಆಗಿರತಕ್ಕಂಥ ಡಬ್ಲ್ಯೂ.ಪಿ. ನಂಬರ್ಸ್‌ಎಲ್ಲಾ ಏನಿತ್ತು? ಅದರ ಬಗ್ಗೆ ಹೇಳಬೇಕಾಗಿತ್ತು.

ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು

ಶ್ರೀ ಬಿ.ಎಸ್. ಯಡಿಯೂರಪ್ಪ : ಸನ್ಮಾನ್ಯ ಅಧ್ಯಕ್ಷರೇ 190,191, 192 ರೂಲ್ ಪ್ರಕಾರ,

Mr. Speaker: "A Member may, with the consent of the Speaker.." We have not gone to that stage.

ಶ್ರೀ ಬಿ.ಎಸ್. ಯಡಿಯೂರಪ್ಪ : ರೂಲ್ 192ರ ಪ್ರಕಾರ ಹಕ್ಕುಚ್ಯುತಿಯ ಪ್ರಶ್ನೆಯನ್ನು ಹಾಕುವ ಹಕ್ಕು ಈ ಕೆಲಖಂಡ ಷರತ್ತುಗಳಿಗೆ ಒಳಪಟ್ಟಿರತಕ್ಕದ್ದು. ಇದೇ ಉಪವೇಶನದಲ್ಲಿ ಒಂದಕ್ಕಿಂತ ಹೆಚ್ಚು ಪ್ರಶ್ನೆ ಹಾಕತಕ್ಕದ್ದಲ್ಲ. ಇದು ಮೊದಲನೆಯ ಸಾರಿ ಬರುತ್ತಿದೆ ಸ್ವಾಮಿ. ಇತ್ತೀಚಿನ ಘಟನೆ ನಿರ್ದಿಷ್ಟ ವಿಷಯಕ್ಕೆ ಮಾತ್ರ ಸೀಮಿತವಾಗಿರತಕ್ಕದ್ದು, ಮೊನ್ನೆ ನೋ ಕಾನ್ಫಿಡೆನ್ಸ್ ಮೋಷನ್‌ಗೆ ಉತ್ತರ ಕೊಡುವಂಥ ಸಂದರ್ಭದಲ್ಲಿ 3ನೇ ನಿಮಿಷದಲ್ಲಿ ಸದನದ ಮಧ್ಯಸ್ಥಿಕೆ ಅವಶ್ಯಕವಾಗಿರಬೇಕು. ಅವಶ್ಯಕವಾಗಿದೆ. ಸನ್ಮಾನ್ಯ ಅಧ್ಯಕ್ಷರೇ, ನಾನು ಬಹಳ ಪ್ರಮುಖವಾದಂಥ ಅಂಶ ಇಲ್ಲಿ ಏನು ಹೇಳುತ್ತಿದ್ದೇನೆಂದರೆ,

ಅಧ್ಯಕ್ಷರು : ಹೇಳುತ್ತೇನೆ ಕೇಳಿ, 190 ಪ್ರಕಾರ ಇವತ್ತು...

ಶ್ರೀ ಬಿ.ಎಸ್. ಯಡಿಯೂರಪ್ಪ : ಮೋಹನ್ ಮೆಕೆನ್ಸ್ ಬಗ್ಗೆ ಹೈಕೋರ್ಟ್‌ನ ಆದೇಶದ ಪ್ರಕಾರ ಮಾತ್ರ ನಾನು ತೀರ್ಮಾನ ತೆಗೆದುಕೊಂಡಿದ್ದೇನೆ ಎನ್ನುವಂತ

ಮಾತನ್ನು ಹೇಳಿದ್ದಾರೆ. ನನ್ನದು ಇದೆ ಪಾಯಿಂಟ್. ಬೇರೆ ಆ ಕಡೆ ಈ ಕಡೆ ಯಾವುದರ ಕಡೆಗೂ ಹೋಗುತ್ತಿಲ್ಲ. ನಿನ್ನೆ ಕ್ಲಾರಿಫಿಕೇಷನ್ ಕೊಡುವಂಥ ಸಂದರ್ಭದಲ್ಲಿ ಆ ವಿಷಯ ಪ್ರಸ್ತಾಪವಾಗಿಲ್ಲ. ಅವರು ಮಾತನಾಡುವಂಥ ಸಂದರ್ಭದಲ್ಲಿ, ಸನ್ಮಾನ್ಯ ಅಧ್ಯಕ್ಷರೇ, 5-9-91..

ಅಧ್ಯಕ್ಷರು : ನೀವು ವಿಷಯಕ್ಕೆ ಹೋಗುತ್ತಿದ್ದೀರಿ..

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನು ವಿಷಯಕ್ಕೆ ಹೋಗುತ್ತಿಲ್ಲ. ನನ್ನದೇನೆಂದರೆ, ನಾನು ಈ ಒಂದು ಪಕ್ಕುಚ್ಯುತಿ ನಿರ್ಣಯ ಏನು ಮಂಡನೆ ಘಾಡುತ್ತಿದ್ದೇನೆ, ಅದನ್ನು ನಾನು ತಮಗೆ ಮನದಟ್ಟು ಮಾಡುವಂಥ ಪ್ರಯತ್ನ ಮಾಡುತ್ತಿದ್ದೇನೆ. ನಾನು ರೂಲ್ ಚೌಕಟ್ಟಿನಲ್ಲಿ ತಮ್ಮ ಗಮನಕ್ಕೆ ತರುವ ಪ್ರಯತ್ನ ಮಾಡುತ್ತಿದ್ದೇನೆ. ನಿನ್ನೆ ಅವರು ಕ್ಲಾರಿಫಿಕೇಷನ್ ಕೊಟ್ಟಂಥ ಸಂದರ್ಭದಲ್ಲಿ ಯಾವ ಹಕ್ಕು ಚ್ಯುತಿ ಬಗ್ಗೆ ನಾನು ತಮ್ಮ ಮುಂದೆ ಗಮನಕ್ಕೆ ತರುವಂಥ ಪ್ರಯತ್ನ ಮಾಡಿದ್ದೆ? ಮನ್ನಣೆ ಮಾಡಬೇಕು. ಇದನ್ನು ಸನ್ಮಾನ್ಯ ಮುಖ್ಯ ಮಂತ್ರಿಗಳು ಪ್ರಸ್ತಾಪ ಮಾಡಿಲ್ಲ. ನಿನ್ನೆಯೂ ಸಹಾ ಪದೇ ಪದೇ ಅದರ ಬಗ್ಗೆ ಪ್ರಸ್ತಾಪ ಮಾಡುವಾಗ ಪ್ರಯತ್ನ ಮಾಡಿದೆ. ಅವರು ನನ್ನ ಮಾತಿನ ಕಡೆ ಗಮನ ಕೊಡಲಿಲ್ಲ.

ಅದಕ್ಕೋಸ್ಕರ ನಾನು ಇವತ್ತು ನಿಮ್ಮಲ್ಲಿ ವಿನಂತಿ ಮಾಡುತ್ತಿರುವಂಥಾದ್ದು, ನಿಶ್ಚಿತವಾಗಿ ಸದನವನ್ನು ಉದ್ದೇಶಪೂರ್ವಕವಾಗಿ ತಪ್ಪುದಾರಿಗೆ ಎಳೆಯುವಂಥ ಅಕ್ಷಮ್ಯ ಅಪರಾಧವನ್ನು ಸನ್ಮಾನ್ಯ ಮುಖ್ಯ ಮಂತ್ರಿಗಳು ಮಾಡಿದ್ದಾರೆ. ಹೈಕೋರ್ಟ್, ಸುಪ್ರೀಮ್ ಕೋರ್ಟ್ ಡಿಸೀಷನ್ ಎಲ್ಲಾ ಗೊತ್ತಿದ್ದರೂ ಸಹಾ, ನಾನು ಪದೇ ಪದೇ ಆ ಒಂದು ಆರ್ಡರ್ ನಂಬರ್‌ನ್ನು ಕ್ವೋಟ್ ಮಾಡುತ್ತಿದ್ದರೂ ಸಹಾ ಅದರ ಕಡೆ ಗಮನ ಕೊಡದೆ ಹೈಕೋರ್ಟ್, ಸುಪ್ರೀಮ್ ಕೋರ್ಟ್ ಆದೇಶದ ಪ್ರಕಾರವೇ ನಾವು ಇವತ್ತು ಮೋಹನ್ ಮೆಕೆನ್ಸ್ ಬಗ್ಗೆ ಏನು ತೀರ್ಮಾನ ತೆಗೆದುಕೊಂಡಿದ್ದೇವೆ ಅದರ ಆಧಾರದ ಮೇಲೆ ಮಾಡಿದ್ದೇವೆ ಎನ್ನುವಂಥ ಮಾತನ್ನು ಹೇಳಿದ್ದಾರೆ. ಅದು ಸ್ಪಷ್ಟವಾಗಿ, ಸನ್ಮಾನ್ಯ ಅಧ್ಯಕ್ಷರೆ, ಹೈಕೋರ್ಟ್ ಡೈರೆಕ್ಷನ್ ಪ್ರಕಾರ ಮಾಡಿರತಕ್ಕದ್ದು ಎನ್ನುವ ಮಾತನ್ನು ಸನ್ಮಾನ್ಯೇ ಮುಖ್ಯಮಂತ್ರಿಗಳು 5-9-91ರಲ್ಲಿ ಹೇಳಿದ್ದಾರೆ. ಅದರ ಪ್ರತಿಯನ್ನು ತಮಗೆ ಕಳುಹಿಸಿಕೊಟ್ಟಿದ್ದೇವೆ.

ಅಧ್ಯಕ್ಷರು : ಅದನ್ನು ನೋಡುತ್ತೇನೆ ನಾನು.

ಶ್ರೀ ಬಿ.ಎಸ್.ಯಡಿಯೂರಪ್ಪ : ತಮಗೆ ಕನ್‌ವಿನ್ಸ್ ಆಗಿದೆ ಎಂದು ಅಂದುಕೊಂಡಿದ್ದೇನೆ. ಇದಕ್ಕೆ ಹಿಂದಿನ ತೀರ್ಪ, ಡಿಸಿಷನ್ ಯಾವುದೂ ಅಗತ್ಯ ಇಲ್ಲ. ಮೇಲು ನೋಟಕ್ಕೆ ಹೈಕೋರ್ಟ್, ಸುಪ್ರೀಂ ಕೋರ್ಟಿನ ಆದೇಶ ಇದ್ದರೂ ಸಹ ಅದನ್ನು ಮೀರಿ ಇವರೇ ರೆಫರ್ ಮಾಡಿ ಮೋಹನ್ ಮೆಕಿನ್ಸ್‌ಗೆ ಜಮೀನು ಮಂಜೂರು ಮಾಡುವ ಪ್ರಯತ್ನ ಸರ್ಕಾರ ಮಾಡಿದೆ. ತಮ್ಮ ಅನುಕೂಲಕ್ಕೆ ತಕ್ಕಂತೆ ಆ ನೋಟ್‌ನ್ನು ಮಾಡಿದ್ದಾರೆ.

Mr. Speaker: If the question raised is based on document, the notice shall be accompanied by the document. Your notice was not accompanied by the document. You gave me the document just now.

ಶ್ರೀ ಬಿ.ಎಸ್. ಯಡಿಯೂರಪ್ಪ : ಡಾಕ್ಯುಮೆಂಟ್ ಕೊಟ್ಟಿದ್ದೇನೆ.

Mr. Speaker: Document is absolutely necessary.

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನು ಹೇಳುತ್ತಾ ಇರತಕ್ಕದ್ದು ಡಾಕ್ಯುಮೆಂಟ್ ಇಲ್ಲಿ ಅಗತ್ಯ ಇಲ್ಲ.

ಪ್ರೊಸೀಡಿಂಗ್ಸ್ ಕಾಪಿಯೇ ಇಲ್ಲಿ ಡಾಕ್ಯುಮೆಂಟ್.

Mr. Speaker: If you have something to fall back upon, there is nothing wrong in giving the document also.

ಶ್ರೀ ಬಿ.ಎಸ್. ಯಡಿಯೂರಪ್ಪ : ನನ್ನ ಪಾಯಿಂಟ್ ಅದಲ್ಲ.

Mr. Speaker : Here this notice which you gave to my office, does not contain, expect the proceedings of this house, any other document. But today you have given me a copy of the Writ petition which is filed before the High Court. So, I need some time to look into the document which you have furnished. I will come back to this.

ಶ್ರೀ ಬಿ.ಎಸ್. ಯಡಿಯೂರಪ್ಪ : ತಾವು ಯಾವಾಗ ಬೇಕಾದರೂ ತೀರ್ಮಾನ ತೆಗೆದುಕೊಂಡು ಆದೇಶ ಕೊಟ್ಟಿದೆ ಅದರಂತೆ ನಾನು ನಡೆದುಕೊಳ್ಳುತ್ತೇನೆ. ಅದಲ್ಲ ಇಲ್ಲಿ ಪ್ರಶ್ನೆ ಇರುವುದು. ಇಲ್ಲಿ ಏನು ಇದೆ ಅಂದರೆ ಪ್ರೊಸೀಡಿಂಗ್ಸ್ ಕಾಪಿಯನ್ನು ಕೊಟ್ಟಿದ್ದೇನೆ.

ಇದೇ ಸಾಕು, ಪ್ರಿವಿಲೇಜ್ ಮೋಷನ್ ಮೂವ್ ಮಾಡುವುದಕ್ಕೆ. ಇದಕ್ಕಿಂತ ಹೆಚ್ಚಿಗೆ ಏನೂ ಡಾಕ್ಯುಮೆಂಟ್ ಬೇಕಾಗಿಲ್ಲ. ಇಲ್ಲಿ ಏನು ಇದೆ? ಇವತ್ತು ಸ್ಪಷ್ಟವಾಗಿರತಕ್ಕದ್ದು, ಹೈಕೋರ್ಟಿನ ಡೈರೆಕ್ಷನ್ ಪ್ರಕಾರ ಮಾಡಿರತಕ್ಕದ್ದು, ಹೈಕೋರ್ಟ್ ಡೈರೆಕ್ಷನ್ ಆರ್ಡರ್ ಪ್ರಕಾರ ನೋಟ್ ಅನ್ನು ಮಾಡಿಲ್ಲ. ನನ್ನ ಪತ್ರದಲ್ಲಿ ಆರ್ಡರ್ ನಂಬರ್ ಇವೆಲ್ಲಾ ಇದೆ.

ಅಧ್ಯಕ್ಷರು : ತಮ್ಮ ಸಬ್‌ಮಿಷನ್ ಏನು ಇದೆ? ಇದು ಯಾವುದೋ ಒಂದು ಹೈಕೋರ್ಟಿನ ತೀರ್ಮಾನ ಎಂದು ಹೇಳುತ್ತೀರಿ ಈಗ ಹೈಕೋರ್ಟಿನ ತೀರ್ಮಾನದ ಕಾಪಿಯನ್ನು 12 ಗಂಟೆಗೆ ಕೊಟ್ಟಿದ್ದೀರಿ. ಅದನ್ನು ನೋಡಬೇಕು. Unless I am convinced that there is a privilege, I cannot.. that is why..

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನು ಈ ಸದನದಲ್ಲಿ ನಡೆದು ಬಂದಿರತಕ್ಕ ಪದ್ಧತಿ ಬಗ್ಗೆ ಹೇಳುವುದಕ್ಕೆ ಹೊರಟಿದ್ದೇನೆ. ಈ ರೀತಿ ಯಾವುದೇ ಒಂದು ಪ್ರಿವಿಲೇಜ್ ಮೋಷನ್ ಮೂವ್ ಮಾಡುವಂತಹ ಸಂದರ್ಭದಲ್ಲಿ ಯಾರು ಪ್ರಿವಿಲೇಜ್ ಮೂವ್ ಮಾಡುತ್ತಾರೆ, ಡಾಕ್ಯುಮೆಂಟ್ ಆಧಾರದ ಮೇಲೆ ಪ್ರಿವಿಲೇಜ್ ಮೂವ್ ಮಾಡುತ್ತಿದ್ದಾರೆ ಎನ್ನುವುದನ್ನು ಮಾತನಾಡಿ ತಮಗೆ ಕನ್‌ವಿನ್ಸ್ ಮಾಡುವುದಕ್ಕೆ ಎಲ್ಲಾ ಸಂದರ್ಭದಲ್ಲಿಯೂ ಅವಕಾಶ ಮಾಡಿಕೊಟ್ಟಿದ್ದೀರಿ.

Mr. Speaker: Firstly, I should be convinced that there is a breach of privilege. What is the breach of privilege? It is something which has to be looked into.

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನು ಅದಕ್ಕೋಸ್ಕರ ವಿಷಯಕ್ಕೆ ಹೋಗುವುದಿಲ್ಲ. ನಿಮ್ಮನ್ನು ಕನ್‌ವಿನ್ಸ್ ಮಾಡುವಂತಹ ಪ್ರಯತ್ನಕ್ಕೆ ಅವಕಾಶ ಮಾಡಿಕೊಡಿ.

Mr. Speaker: We have not reached that stage. First, I should be satisfied by the document which you have supplied to my office. Give me some time to look into the document which you have given to me. Then we will take it up at an appropriate time.

ಶ್ರೀ ಎಸ್.ಬಂಗಾರಪ್ಪ : ತಾವು ಅಂತಿಮ ತೀರ್ಮಾನದ ಬಗ್ಗೆ ಹೇಳಿದ್ದೀರಿ. ಮಾನ್ಯ ಸದಸ್ಯರು ಕಳುಹಿಸಿರತಕ್ಕ ಹಕ್ಕುಚ್ಯುತಿ ನಿಲುವಿನ ವಿಚಾರದಲ್ಲಿ ತಾವು ಹೇಳಿದ್ದೀರಿ. ಅದೇನೋ ರಿಟ್ ಪಿಟಿಷನ್ ನಂಬರ್ಸ್ ಮತ್ತೊಂದರಲ್ಲಿ ಆಗಿರತಕ್ಕದ್ದು ಒಂದು ಮತ್ತು ಬೇರೆ ವಿಚಾರದ ಬಗ್ಗೆ ಪ್ರಸ್ತಾಪ ಆಗಿದೆ. ನಾನು ವಿವರವಾಗಿ ಇರತಕ್ಕ ಮಾತನ್ನು, ಹೇಳಿಕೆಯನ್ನು ಹೇಳಿದ್ದೇನೆ. ತಾವು ಇರಲಿಲ್ಲ. ಮಾನ್ಯ ಉಪಾಧ್ಯಕ್ಷಿಣಿಯವರು ಕುಳಿತಿದ್ದರು. ಅವರ ಅನುಮತಿ ಪಡೆದು ವಿವರಣೆಗಳನ್ನು ಈ ಸದನದ ಮುಂದೆ ಇಟ್ಟಿದ್ದೇನೆ. ಅದನ್ನು ನೋಡಿದರೆ ಸನ್ಮಾನ್ಯ ಸದಸ್ಯರಾದ ಯಡಿಯೂರಪ್ಪನವರೇ,ಇರತಕ್ಕ ಸಂಶಯ ನಿವಾರಣೆ ಆಗುತ್ತದೆ ಎಂದು ನನ್ನ ಭಾವನೆ. ಮಾನ್ಯ ಸಭಾಧ್ಯಕ್ಷರ ಗಮನಕ್ಕೆ ಈ ವಿಚಾರ ತಂದಿದ್ದೇನೆ. ಆದ್ದರಿಂದ ನಾನು ನೋ ಕಾನ್ ಫಿಡೆನ್ಸ್ ಮೋಷನ್‌ಗೆ ಉತ್ತರ ಕೊಡುವ ವಿಚಾರದಲ್ಲಿ ಏನು ಸಂಶಯ ಉದ್ಭವ ಆಗಿದೆ, ಆ ನಂತರ ಕೊಟ್ಟಿರತಕ್ಕ ವಿವರಣೆಯಿಂದ ಅದು ಬಗೆಹರಿಯುತ್ತದೆ ಎಂದು ಭಾವಿಸಿದ್ದೆ. ನಾನು ಕೊಟ್ಟಿರತಕ್ಕ ವಿವರಣೆಯನ್ನು ಕೂಡ ಗಮನದಲ್ಲಿಟ್ಟುಕೊಂಡರೆ ಹಕ್ಕುಚ್ಯುತಿ ಪ್ರಶ್ನೆ ಇಲ್ಲಿ ಬರುವುದಿಲ್ಲ.

ಅಧ್ಯಕ್ಷರು : ನೀವು ಏನು ಸ್ಟೇಟ್‌ಮೆಂಟ್ ಮಾಡಿದ್ದೀರಿ ಅದನ್ನೂ ನಾನು ನೋಡುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಅದನ್ನುತಾವು ನೋಡಿ. ನಿನ್ನೆ ಅವರು ಉತ್ತರ ಕೊಡುವಂತಹ ಸಂದರ್ಭದಲ್ಲಿ ಅವರು ಹೇಳಿರತಕ್ಕಂಥ ಸೆಂಟನ್ಸ್ ಏನು ಇದೆ ಎಂದರೆ.

"He further said the High Court had not'..

Mr. Speaker: I will not let you go into it. I will look into it.

ಶ್ರೀ ಬಿ.ಎಸ್. ಯಡಿಯೂರಪ್ಪ : ನಿನ್ನೆ ಅವರು ಕ್ಲಾರಿಫೈ ಮಾಡುವ ಸಂದರ್ಭದಲ್ಲಿ ಇದರ ಬಗ್ಗೆ ಸಾಕಷ್ಟು ಗೊಂದಲ ತರುವಂತಹ ಒಂದು ಉತ್ತರವನ್ನು ಕೊಟ್ಟಿದ್ದಾರೆ. ನಿನ್ನೆ ಉತ್ತರ ಕೊಟ್ಟಿರುವುದು ಮತ್ತೆ ಪ್ರಿವಿಲೇಜ್ ಆಗುತ್ತದೆ.

ಅಧ್ಯಕ್ಷರು : ಅದನ್ನು ನಾನು ನೋಡುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಏಕೆಂದರೆ ಅವರು ಹೇಳಿದ್ದಾರೆ. ಹೈಕೋರ್ಟ್ ಸುಪ್ರೀಂ ಕೋರ್ಟ್ ಈ ತರಹ ಆದೇಶ ಕೊಟ್ಟಿಲ್ಲ ಎಂದು ಫರ್ದರ್ ಪ್ರಿವಿಲೇಜ್‌ಗೆ ಅವಕಾಶಮಾಡಿಕೊಟ್ಟಿದ್ದಾರೆ. ನನಗೆ ಏನು ಭಾವನೆ ಇದೆ ಎಂದರೆ ಇಲ್ಲಿ ಏನೋ ಮಾನ್ಯ ಮುಖ್ಯಮಂತ್ರಿಗಳ ವಿರುದ್ಧ ಪ್ರಿವಿಲೇಜ್ ಮೋಷನ್ ಮೂವ್ ಮಾಡಿ ದೊಡ್ಡ ಸಾಧನೆ ಮಾಡುತ್ತೇನೆ ಎಂದಲ್ಲ. ಇವತ್ತು ಕೋಟ್ಯಾಂತರ ರೂಪಾಯಿ ಅವ್ಯವಹಾರ ನಡೆಯುತ್ತಿದೆ.

Mr. Speaker : You are going into the merits. I will look into it.

ಶ್ರೀ ವಾಟಾಳ್ ನಾಗರಾಜ್ : ನಾನೂ ಸಹ ಒಂದು ವಿಷಯವನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ.